ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ಸನ್ಮಾನ್ಯ ಸಭಾಧ್ಯಕ್ಷರೇ ನಾನು ಈಗಾಗಲೇ ಹೇಳಿದೆ, ಇದು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯತಕ್ಕಂಥದ್ದು ಎಂದು. ಇಡೀ ರಾಜ್ಯದಲ್ಲಿ ಯಾರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡು ನಮಗೆ ಸಬ್‌ಮಿಟ್ ಮಾಡಿದರೆ ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತೇವೆ. ಈ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡತಕ್ಕಂಥದ್ದು ಏನಿದೆ ಪ್ರತಿಯೊಂದು ಸೌಲಭ್ಯವನ್ನು ಕೊಡಲಿಕ್ಕಾಗಿಯೇ ಹಣ ಬಿಡುಗಡೆ ಮಾಡುತ್ತಾರೆ. ಅವರೇನು ಉಳಿದ ವಿಚಾರಗಳನ್ನು ಹೇಳಿದ್ದಾರೆ, ಅದರ ವರದಿಯನ್ನು ನಾನು ತರಿಸಿ ಕೊಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಇದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಣೆ ಮಾಡಲಿಕ್ಕೆ ಏನು ಸಮಸ್ಯೆ ಇದೆ? ಇದು ಕೇವಲ 5 ಜಿಲ್ಲೆಗಳಿಗೆ ಸೀಮಿತವಾದಂಥ ಅಥವಾ ನಗರಗಳಿಗೆ ಸೀಮಿತವಾದಂಥ ವಿಚಾರಧಾರೆಯಲ್ಲ. ಇದು ಇಡೀ ರಾಜ್ಯದಲ್ಲಾಗಿರತಕ್ಕಂಥ ಸಮಸ್ಯೆ. ಹೀಗಾಗಿ ಪ್ರತಿಯೊಂದು ಜಿಲ್ಲೆಗೂ ಈ ಸ್ಕೀಂ ಅನ್ನು ವಿಸ್ತರಣೆ ಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನು ಎಂಬುದೇ ನಮ್ಮ ಮೂಲಭೂತವಾದ ಪ್ರಶ್ನೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ನಾನು ಆವಾಗಿನಿಂದ ಹೇಳುತ್ತಿದ್ದೇನೆ. ಇದು ಸ್ವಯಂ ಸೇವಾ ಸಂಸ್ಥೆಗಳಿಗೆ ದೊರೆಯತಕ್ಕಂಥ ಕಾರ್ಯಕ್ರಮ ಮತ್ತು ಇದು ಕೇಂದ್ರ ಸರ್ಕಾರದ ಯೋಜನೆ. ಒಂದುವೇಳೆ ಬೇರೆ ಜಿಲ್ಲೆಯವರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡರೆ ನಾನು ರೆಕಮೆಂಡ್ ಮಾಡಿ ಕಳುಹಿಸಿಕೊಡುತ್ತೇನೆ, ತದನಂತರ ಆ ಕಾರ್ಯಕ್ರಮ ಆ ಸಂಸ್ಥೆಗೆ ಬರುತ್ತದೆ.

ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಪಾವತಿಸಬೇಕಾದ ಹಣ

609(6538) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ (ಹುಕ್ಕೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ 2002–03, 2003–04 ಹಾಗೂ 2004–05ರಿಂದ ರೈತರಿಗೆ ಕಬ್ಬಿನ ಬಿಲ್, ಎನ್.ಎಸ್.ಸಿ. ಮರು ಪಾವತಿ ಹಾಗೂ ಕಾರ್ಮಿಕರಿಗೆ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸಕ್ಕರೆ ಕಾರ್ಖಾನೆಯ ಲಾಭ ನಷ್ಟವೇನು;

ಈ) ನಷ್ಟವಾದಲ್ಲಿ ಕಾರಣವೇನು;

ಉ) ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದಂತೆ ಸಾಲವಿದೆಯೇ;

ಊ) ಹಾಗಿದ್ದಲ್ಲಿ ಕಾರಣವೇನು; ಇದರಿಂದ ರೈತರ ಅಭಿವೃದ್ಧಿಗೆ ತೊಂದರೆಯುಂಟಾಗುವುದಿಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಕಾರ್ಖಾನೆಯು ಪಾವತಿಸಬೇಕಾದ ಮೊತ್ತದ ವಿವರಗಳು ಕೆಳಕಂಡಂತಿದೆ.

1. 2002–03ನೇ ಸಾಲಿನ ಎಸ್.ಎಂ.ಪಿ. ದರದ ಪ್ರಕಾರ ರೂ. 1511.03 ಲಕ್ಷ ಪಾವತಿಸಬೇಕಾಗಿರುತ್ತದೆ.
2. 2004–05ನೇ ಸಾಲಿನ ಕಬ್ಬಿನ ಬಿಲ್ ಬಾಕಿಯನ್ನು ಈಗಾಗಲೇ ಪಾವತಿಸಲಾಗಿದೆ.

3. ಎನ್‌ಎಸ್‌ಸಿ ರೂ. 34.44 ಲಕ್ಷ ಮರುಪಾವತಿ ಮಾಡಬೇಕಾಗಿದೆ.

ಆ) ಕಬ್ಬು ಬಾಕಿ ಹಣವನ್ನು ಪಾವತಿಸಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು, ಉಳಿದ ಬಾಕಿ ಮೊತ್ತವನ್ನು ಪಾವತಿಸಲು ಕಾರ್ಖಾನೆಗೆ ಸೂಚಿಸಲಾಗುವುದು.

ಇ) 2003–04ನೇ ಸಾಲಿನಲ್ಲಿ ಕಾರ್ಖಾನೆ ರೂ. 7.85 ಕೋಟಿ ನಷ್ಟ ಅನುಭವಿಸಿದೆ. 2004–05ನೇ ಸಾಲಿನ ತಾತ್ಕಾಲಿಕ ಆಸ್ತಿ ಜವಾಬ್ದಾರಿ ತಃಖ್ತೆಯ ಪ್ರಕಾರ ಕಾರ್ಖಾನೆಯ ರೂ. 8.80 ಲಕ್ಷ ಲಾಭಗಳಿಸಿದೆ.

ಈ) ಕರ್ನಾಟಕದಲ್ಲಿ ಸತತ 4 ವರ್ಷಗಳ ಬರಗಾಲ ಹಾಗೂ ಕಾರ್ಖಾನೆಯ ಕಾರ್ಯಕ್ಷೇತ್ರದಲ್ಲಿ ಕಬ್ಬಿಗೆ ಬಿಳಿ ಉಣ್ಣೆರೋಗ ತಗಲಿದ ಕಾರಣ ಕಬ್ಬು ನುರಿಸುವ ಸಾಮರ್ಥ್ಯಕ್ಕೆ ಅನುಗುಣವಾಗಿ ಕಬ್ಬು ದೊರೆಯದ ಕಾರಣ ಹಾಗೂ ವೇತನ ಇನ್ನೀತರೆ ಕಡ್ಡಾಯ ವೆಚ್ಚಗಳು ಹೆಚ್ಚಿನ ಆಡಳಿತಾತ್ಮಕ ವೆಚ್ಚಗಳು ಮತ್ತು ಸಕ್ಕರೆ ಬೆಲೆ ಕುಸಿತ ಈ ಕಾರಣಗಳಿಂದ ಕಾರ್ಖಾನೆಯು ನಷ್ಟ ಅನುಭವಿಸಿದೆ.

ಉ) ಕಾರ್ಖಾನೆಗೆ ಸಂಬಂಧಿಸಿದಂತೆ ರೂ. 37.78 ಕೋಟಿ ಸಾಲ ಇರುತ್ತದೆ.

ಊ) ಕಾರ್ಮಿಕರ ವೇತನ ಹಾಗೂ ದಿನ ನಿತ್ಯದ ಖರ್ಚು ವೆಚ್ಚಗಳನ್ನು ಪಾವತಿಸಲು ಹಾಗೂ ರೈತರ ಕಬ್ಬಿನ ಬಿಲ್ಲಿನ ಪಾವತಿಯನ್ನು ಸಕಾಲದಲ್ಲಿ ಮಾಡಲು ಈ ಸಾಲವನ್ನು ಪಡೆಯಲಾಗಿದೆ.

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ : ಮಾನ್ಯ ಅಧ್ಯಕ್ಷರೆ, ನಾನು ಇಲ್ಲಿ ರೈತರಿಗೆ ಬರಬೇಕಾದ ಬಾಕಿ, ಕಾರ್ಮಿಕರಿಗೆ ಬರಬೇಕಾದ ಬಾಕಿ, ಎನ್‌ಎಸ್‌ಸಿ, ಇಂದಿರಾ ವಿಕಾಸ ಪತ್ರಗಳನ್ನು ಕೊಡಬೇಕಾಗಿರುವುದನ್ನು ಇನ್ನು ಕೊಟ್ಟಿಲ್ಲ ಎನ್ನುವಂಥ ಮಾತನ್ನು ಕೇಳಿದ್ದೇನೆ. ಇದರ ಬಗ್ಗೆ ತಿಳಿಸಿ, ಎಸ್‌ಎಂಸಿ 1511.03 ಲಕ್ಷ ಮತ್ತು ಇದರ ಜೊತೆಗೆ ಕಬ್ಬಿನ ಬಿಲ್ ಬಾಕಿಯನ್ನು ಈಗಾಗಲೇ ಪೂರ್ತಿ ಕೊಟ್ಟಿದ್ದಾರೆಂದು ಹೇಳಿದ್ದಾರೆ, ಇದು ನಿಜವಾಗಿಯೂ ಸುಳ್ಳು, ನನ್ನ ಹತ್ತಿರ ಸಹಿತ ಅನೇಕ ಮಾಹಿತಿಗಳು ಇವೆ, ರೈತರ ಬಿಲ್ ಇನ್ನು ಬಹಳಷ್ಟು ಬಾಕಿ ಇದೆ. ಅದರ ಜೊತೆಗೆ ಎನ್‌ಎಸ್‌ಸಿ 34.44 ಲಕ್ಷ ರೂಪಾಯಿ ರೈತರ ಬಾಕಿ ಕೊಡಬೇಕಾಗಿದೆ. ಅದನ್ನು ಸಹಿತ ಕೊಟ್ಟಿಲ್ಲ, ಇವತ್ತು ಇಲ್ಲಿ 'ಕಾನೂನು ರೀತಿ ಅವರ ಕಡೆಯಿಂದ ಹಣ ವಸೂಲಾತಿ ಮಾಡಿಸಿಕೊಡುತ್ತೇವೆಂದು' ಹೇಳಿದ್ದಾರೆ. ಇದು ಸಾಧ್ಯವೇ ಎನ್ನುವ ಮಾತನ್ನು ಮಾನ್ಯ ಸಚಿವರಲ್ಲಿ ಕೇಳುತ್ತಾ, ಅದರ ಜೊತೆಗೆ 2003–04 ಮತ್ತು 2004–05ರ ಆಡಿಟ್ ವರದಿ ಅಥವಾ ಬ್ಯಾಲೆನ್ಸ್ ಷೀಟ್ಸ್ ಲಭ್ಯ ಇದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತಿದ್ದೇನೆ. 2005 ರವರೆಗೆ ಕಾರ್ಖಾನೆಯ ಮೇಲೆ ಇದ್ದ ಸಾಲದ ಬಗ್ಗೆ ನಿಖರವಾದಂಥ ಮಾಹಿತಿ ಹೇಳಲು ಸಾಧ್ಯವಿದೆಯೇ ಎಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ನಾವು ಶುಗರ್ ಕೇಸ್ ಡ್ಯೂಸ್ ಇಲ್ಲವೆಂದು ಹೇಳಿಲ್ಲ. 15 ಕೋಟಿ 11 ಲಕ್ಷ ರೂಪಾಯಿಗಳನ್ನು ರೈತರಿಗೆ ಸಕ್ಕರೆ ಕಾರ್ಖಾನೆ ಕೊಡಬೇಕಾಗಿದೆ ಎಂದು ನಾನು ಹೇಳಿದ್ದೇನೆ. ಕಾರ್ಮಿಕರಿಗೆ 30–6–05 ರ ತನಕ ಎಲ್ಲಾ ಸಂಬಳ ಕೊಡಲಾಗಿದೆ. 34.44 ಲಕ್ಷ ರೂಪಾಯಿ ಎನ್‌ಎಸ್‌ಸಿ ಯ ಹಣ ರೈತರಿಗೂ ಕೊಡಬೇಕಾಗಿದೆ ಎಂದು ಇದನ್ನು ಕೂಡ ಸ್ಪಷ್ಟವಾಗಿ ಹೇಳಿದ್ದೇನೆ. ಈಗ ಮುಖ್ಯವಾಗಿ ಈ ಸಕ್ಕರೆ ಕಾರ್ಖಾನೆ ಏನು ಇದೆ ಅದು ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಆ್ಯಕ್ಟ್ ಕೆಳಗಡೆ ಬರುತ್ತದೆ. ಹೀಗಾಗಿ ಇಲ್ಲಿ ಆಡಿಟ್ ಮಾಡುವುದು ಚಾರ್ಟರ್ಡ್ ಅಕೌಂಟೆಂಟ್ಸ್.. ಇದರ ಮೇಲೆ ನಿಯಂತ್ರಣ ಇರುವುದು ಸೆಂಟ್ರಲ್ ರಿಜಿಸ್ಟ್ರಾರ್ ಅವರಿಗೆ ನಮ್ಮ ಇಲಾಖೆಯಿಂದ ಇದರ ಆಡಿಟ್ ಆಗುವುದಿಲ್ಲ. ಹೀಗಾಗಿ ಈ ಚಾರ್ಟರ್ಡ್ ಅಕೌಂಟೆಂಟ್ಸ್ ಏನು

ಆಡಿಟ್ ಮಾಡಿ ರಿಪೋರ್ಟ್ ಕೊಟ್ಟಿದ್ದಾರೆ, ಅದನ್ನು ಬೇಕಾದರೆ ನಾನು ತರಿಸಿ ನಿಮಗೆ ಕಳುಹಿಸುತ್ತೇನೆ. ಎರಡನೇಯದು ರೈತರ ಬಾಕಿ ಏನು ಇದೆ ಅದನ್ನು ಕೊಡಬೇಕು; ಶುಗರ್ ಕೇನ್ ಕಂಟ್ರೋಲ್ ಆಫೀಸ್ ಏನು ಇದೆ ಆ ಮೇರೆಗೆ ಅವರು ಆದೇಶ ಕೊಟ್ಟು ಆದಷ್ಟು ಬೇಗನೆ ಕೊಡಲಿಕ್ಕೆ ಸರ್ಕಾರದ ವತಿಯಿಂದ ನಾವು ಪ್ರಯತ್ನ ಮಾಡುತ್ತೇವೆ. ತಾವು ಸಾಲದ ಬಗ್ಗೆ ಕೇಳಿದಿರಿ, 3–4 ತರಹದ ಸಾಲಗಳು ಇವೆ, ರೈತರು ಸಕ್ಕರೆ ಕಾರ್ಖಾನೆಯಲ್ಲಿ ಡಿಪಾಸಿಟ್ ಇಟ್ಟಿದ್ದಾರೆ, ನಾವು ಅದನ್ನು ಸಾಲ ಎಂದು ಹೇಳುವುದಕ್ಕೆ ಆಗುವುದಿಲ್ಲ. ರೈತರು ಡಿಪಾಸಿಟ್ ಇಟ್ಟಿದ್ದಾರೆ, ಸಕ್ಕರೆ ಕಾರ್ಖಾನೆಗೆ ಅದು ಸಾಲ, ಆದರೆ ರೈತರು ಸುಮಾರು 29.48 ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಇಟ್ಟಿದ್ದಾರೆ. ನಿಮಗೆ ಈಗಾಗಲೇ ಹೇಳಿದಂತೆ 15 ಕೋಟಿ ರೂಪಾಯಿ ಕಬ್ಬಿನ ಬಾಕಿ ಕೊಡಬೇಕಾಗಿದೆ. ಸಹಕಾರ ಬ್ಯಾಂಕ್ ಬೇರೆ ಬೇರೆ ಬ್ಯಾಂಕ್‌ನಿಂದ, ನಮಗೆ ಬಂದ ಮಾಹಿತಿ ಪ್ರಕಾರ 58.59 ಲಕ್ಷ ಕೊಡಬೇಕಾಗಿದೆ. ಹೀಗಾಗಿ ಒಟ್ಟಾರೆಯಾಗಿ ಇವರು 102.75 ಕೋಟಿ ಅಂದಾಜು 103 ಕೋಟಿ ರೂಪಾಯಿಗಳನ್ನು ರೈತರು ಕಬ್ಬಿನ ಬಾಕಿ, ರೈತರೇನು ಡಿಪಾಸಿಟ್ ಇಟ್ಟಿದ್ದಾರೆ. ಆ ರೈತರಿಗೆ ಕೈಯಿಂದ ಕೊಡುವುದು, ಬ್ಯಾಂಕ್ ಸಾಲ, ಇಷ್ಟೆಲ್ಲಾ ಕೊಡಬೇಕಾಗಿದೆ.

ಶ್ರೀ ಎ.ಬಿ. ಪಾಟೀಲ್ (ಸಂಕೇಶ್ವರ) : ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರಕ್ಕೆ ಬರುತ್ತಿರುವುದರಿಂದ ಒಂದು ಮಾಹಿತಿಯನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಪ್ರಶ್ನೆಗೆ ಸಂಬಂಧಪಟ್ಟಂತೆ ಮಾನ್ಯ ಸಹಕಾರ ಸಚಿವರು ಈಗಾಗಲೇ ಉತ್ತರ ಕೊಟ್ಟಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಸರಿಯಾಗಿ ಮಳೆ ಆಗದೇ ಇರುವುದರಿಂದ ಬರಗಾಲ ಇದೆ. ಈ ಒಂದು ದೃಷ್ಟಿಯಿಂದ ಸರಿಯಾಗಿ ಕಬ್ಬು ಸಿಗದೇ ಇರುವುದರಿಂದ ಅಲ್ಲಿ ಹಾನಿಯಾಗಿದೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಇದೇ ಸರ್ಕಾರದವರು ಶುಗರ್ ಡೈರೆಕ್ಟರ್ ಆಫೀಸ್‌ನಿಂದ ಡೈರೆಕ್ಟ್ ತನಿಖೆ ಮಾಡಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ ಎಂದು ಲಿಖಿತ ಉತ್ತರ ಇವತ್ತು ಕೊಟ್ಟಿದ್ದಾರೆ. ಸುಮಾರು 120 ಕೋಟಿ ರೂಪಾಯಿಗಳಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂದು ಪ್ರಿಲಿಮಿನರಿ ತನಿಖೆಯಿಂದ ಪ್ರೂವ್ ಆಗಿದೆ. ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಗೆ ಕಬ್ಬು ಕಡಿಮೆ ಬಂದಿರತಕ್ಕಂಥದನ್ನು ನಾವು ಎಂದೂ ಕೂಡ ನೋಡಿಲ್ಲ. ಮೊದಲು ಮಾನ್ಯ ಸಹಕಾರ ಸಚಿವರು ಅವರೂ ಕೂಡ ಕ್ಯೂ ಹಚ್ಚಿ ಕಳುಹಿಸಿಕೊಟ್ಟಿದ್ದರು. ಅಲ್ಲಿ ಕಬ್ಬು ಕಡಿಮೆ ಎನ್ನತಕ್ಕಂಥ ಪ್ರಶ್ನೆ ಎಲ್ಲಿ ಬರುತ್ತದೆ? ಇದು ಯಾರೋ ಅಧಿಕಾರಿಗಳು ಇವತ್ತು ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ನಮ್ಮ ಏರಿಯಾದಲ್ಲಿ ಹೆಚ್ಚು ಕಬ್ಬು ಬೆಳೆಯುವುದರಿಂದ ಈ ಸಕ್ಕರೆ ಕಾರ್ಖಾನೆಗೆ ಎಂದೂ ಕೂಡ ಕಬ್ಬು ಕಡಿಮೆ ಬಿದ್ದಿಲ್ಲ. ಈಗಾಗಲೇ ನೀವೇ ತನಿಖೆ ಮಾಡಿದ್ದೀರಿ. ಮತ್ತೆ ಲಿಖಿತ ಉತ್ತರದಲ್ಲಿ ಕೂಡ ಕೊಟ್ಟಿದ್ದೀರಿ. ಕಬ್ಬು ಕಡಿಮೆ ಬರತಕ್ಕಂಥ ಪ್ರಶ್ನೆಯೇ ಇಲ್ಲ. ಆದ್ದರಿಂದ, ಇದಕ್ಕೆ ಏನಾದರೂ ಸ್ಪಷ್ಟವಾದ ಉತ್ತರವನ್ನು ಹೇಳಲೇ ಬೇಕಾಗುತ್ತದೆ. ಇದು ಮಲ್ಟಿ ಸ್ಟೇಟ್ ಆ್ಯಕ್ಟ್ ಒಳಗೆ ಬರುತ್ತದೆಂದು ಹೇಳಿದ್ದಾರೆ, ಇದನ್ನು ಒಪ್ಪಿಕೊಳ್ಳೋಣ. ಇದು ಕೇಂದ್ರಸರ್ಕಾರಕ್ಕೆ ಬರಬಹುದು. ಆದರೆ, ಇದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಜವಾಬ್ದಾರಿ ಏನೂ ಇಲ್ಲ ಎನ್ನುವಂತೆ ಇದಾಯಿತು. ಹಾಗಾದರೆ, ರೈತರ ಗತಿ ಏನು? ಅಲ್ಲಿರತಕ್ಕಂಥ ಸಕ್ಕರೆ ಕಾರ್ಖಾನೆ ಇಡೀ ದೇಶದಲ್ಲಿಯೇ ನಂಬರ್ ಒನ್ ಇದ್ದಂಥದ್ದು ಇವತ್ತು ಈ ಮಟ್ಟಕ್ಕೆ ಹೋಗಬೇಕಾದರೆ ಅಲ್ಲಿನ ಆಡಳಿತದಲ್ಲಿ ಅವ್ಯವಹಾರವಾಗಿದೆ ಎಂದು ನೀವೇ ಹೇಳಿದ್ದೀರಿ. ಇದನ್ನು ಇನ್ನು ಯಾರೂ ಹೇಳಬೇಕಾಗಿಲ್ಲ. ಇದರ ಮೇಲೆ ಏನಾದರೊಂದು ಮಾಡಬೇಕಲ್ಲವೆ?

ಮತ್ತೆ ಆಡಿಟರ್ ಬಗ್ಗೆ ಮಾನ್ಯ ಸಚಿವರು ಹೇಳಿದರು. ನನ್ನ ಮಾಹಿತಿ ಪ್ರಕಾರ ಕರ್ನಾಟಕ ಸರ್ಕಾರದ ಆಟಿಡ್ ಇಲಾಖೆ ಖಾಯಂ ಆಗಿ ಇದೆ. ಅವರ ಆಡಿಟ್ ಲೆಕ್ಕ ಚೆನ್ನಾಗಿದೆ ಎಂದು ಅವರಿಗೆ ಸರ್ಟಿಫಿಕೇಟ್ ಕೂಡ ಕೊಟ್ಟಿದ್ದಾರೆ. ಈಗ ಅವರು ಚಾರ್ಟೆಡ್ ಅಕೌಂಟೆಂಟ್‌ರವರಿಂದ ಮಾಡಿಸಿಕೊಳ್ಳಲಿ. ಆದರೆ, ಇವತ್ತು ಲೋಕಲ್ ಆಡಿಟ್ ಮಾಡಿಸುವುದಕ್ಕೆ ಏನೂ ತೊಂದರೆ ಇಲ್ಲ. ಇವರು ಮೊದಲು ಅಲ್ಲಿದ್ದರು. ಈಗಲೂ ಕೂಡ ಅಲ್ಲಿದ್ದಾರೆ. ಅವರೂ ಕೂಡ ಆಡಿಟ್‌ನ್ನು ಹೀಗೆ ಮಾಡಿದರೆಂದು ಮಾನ್ಯ ಸಚಿವರು ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ವೀರಣ್ಣ ಸಿ. ಚರಂತಿಮಠ್ (ಬಾಗಲಕೋಟೆ) : ಮಾನ್ಯ ಅಧ್ಯಕ್ಷರೆ, ಹಲವಾರು ವರ್ಷಗಳಿಂದ ಅತ್ಯಂತ ಲಾಭದಾಯಕವಾಗಿ ನಡೆಯುತ್ತಿದ್ದ ಈ ಫ್ಯಾಕ್ಟರಿ ಕೆಲವೇ ವರ್ಷಗಳಲ್ಲಿ ಈ ರೀತಿ ಏಕೆ ಆಯಿತು? ಇದು ನಾವು ಇದರ ಬಗ್ಗೆ ಬರೇ ಪ್ರಶ್ನೆ ಕೇಳತಕ್ಕಂಥದ್ದಕ್ಕೆ ಉತ್ತರ ಹೇಳತಕ್ಕಂಥದ್ದಲ್ಲ. ಸುಮಾರು 103 ಕೋಟಿ ರೂಪಾಯಿಗಳಷ್ಟು ಲಾಸ್ ಆಗಿರುವುದಲ್ಲದೆ ಇನ್ನೂ 15 ಕೋಟಿ ರೂಪಾಯಿಗಳಷ್ಟು ರೈತರಿಗೆ ಬಾಕಿ ಕೊಡಬೇಕಾಗಿರತಕ್ಕಂಥಾದ್ದು ಇದೆ ಎಂದರೆ, ಕಬ್ಬು ಬೆಳೆದು ಅವರಿಗೆ ಕೊಟ್ಟಂಥ ರೈತರ ಗತಿ ಏನು ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಸಕ್ಕರೆ ಕಾರ್ಖಾನೆಗಳ ಮೇಲೆ ತಾವು ದಯವಿಟ್ಟು ನಿಯಂತ್ರಣವನ್ನು ತೆಗೆದುಕೊಂಡು ಬರಬೇಕು. ಇಲ್ಲದಿದ್ದರೆ ಏನಾಗುತ್ತದೆಂದರೆ, ನಮ್ಮಲ್ಲಿರತಕ್ಕಂಥ ಪ್ರತಿಯೊಂದು ಫ್ಯಾಕ್ಟರಿಗಳಲ್ಲಿ ಈ ರೀತಿಯಾಗಿ 100, 103, 110 ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗುತ್ತಾ ಹೋದರೆ ಇದರಿಂದ ರೈತರಿಗೆ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ ಅಥವಾ ಕೋ-ಆಪರೇಟಿವ್ ಸೆಕ್ಟರ್‌ಗೂ ಕೂಡ ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕು. ರಾಜ್ಯದಲ್ಲಿ ಈ ರೀತಿಯಾದ ಯಾವುದೇ ಫ್ಯಾಕ್ಟರಿಗಳು ಇದ್ದರೂ ಕೂಡ ಅವುಗಳ ಮೇಲೆ ತನಿಖೆ ಮಾಡಿಸಿ ಕ್ರಮ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದಲ್ಲಿ ಸುಮಾರು 30 ರಿಂದ 35 ಸಕ್ಕರೆ ಕಾರ್ಖಾನೆಗಳಿವೆ. ಮಂಡ್ಯ ಸಕ್ಕರೆ ಕಾರ್ಖಾನೆ ಬಗ್ಗೆ ಕೂಡ ಇಲ್ಲಿ ಉಲ್ಲೇಖವಾಗಿದೆ. ಸರ್ಕಾರದಲ್ಲಿ ಮತ್ತು ಮಾನ್ಯ ಸಚಿವರಲ್ಲಿ ನಾನು ಈ ಸಂದರ್ಭದಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಆ ಸಕ್ಕರೆ ಕಾರ್ಖಾನೆಗಳು ಏನೇನು ಮಾಡುತ್ತಿವೆ, ಅಲ್ಲಿ ಏನೇನು ಆಗುತ್ತಿದೆ, ಅಲ್ಲಿ ಏನೇನು ಹೋಗುತ್ತಿದೆ ಎಂಬುದಲ್ಲದೆ ನಮ್ಮ ರೈತರು ಏನೆಲ್ಲಾ ತೊಂದರೆಗಳು ತೆಗೆದುಕೊಳ್ಳುತ್ತಿದ್ದಾರೆ ಎಂಬುದರ ಬಗ್ಗೆ ಒಂದು ಸ್ಟೇಟಸ್ ರಿಪೋರ್ಟ್‌ನ್ನು ಕೊಟ್ಟರೆ, ಆ ಸಕ್ಕರೆ ಕಾರ್ಖಾನೆಗಳನ್ನು ಸರಿ ದಾರಿಯಲ್ಲಿ ಹೇಗೆ ನಡೆಸಬಹುದು ಮತ್ತು ರೈತರ ಪರವಾಗಿ ನಡೆಸಬಹುದು ಎಂಬುದರ ಬಗ್ಗೆ ಸರ್ಕಾರದ ಕಡೆಯಿಂದ ನಿಯಂತ್ರಣ ಮಾಡುವುದಕ್ಕೆ ಆದರೂ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ, ಇಡೀ ರಾಜ್ಯದಲ್ಲಿರುವ 30-35 ಸಕ್ಕರೆ ಕಾರ್ಖಾನೆಗಳನ್ನು ನಾನು ನೋಡಿರುವ ಹಾಗೆ ಮತ್ತು ಇವುಗಳ ವರದಿಗಳನ್ನು ಶುಗರ್ ಡೈರೆಕ್ಟರ್ ಆಫೀಸ್‌ನಿಂದ ಮತ್ತು ಇತ್ಯಾದಿಗಳಿಂದ ತರಿಸಿಕೊಂಡು ನೋಡಿದ್ದರ ಪ್ರಕಾರ ಇವುಗಳಿಗೆ ಸರಿಯಾದ ನಿಯಂತ್ರಣ ಇಲ್ಲದೇ ಇರುವುದರಿಂದ ಅವರುಗಳು ರೈತರನ್ನು ಶುದ್ಧ ಮೋಸ ಮಾಡುವಂಥ ಒಂದು ಸ್ಥಿತಿಗೆ ಇವತ್ತಿನ ದಿವಸ ಸಕ್ಕರೆ ಕಾರ್ಖಾನೆಗಳು ಹೋಗಿ ತಲುಪುತ್ತಿವೆ. ಆದ್ದರಿಂದ ಇವುಗಳನ್ನು ಸರ್ಕಾರ

ನಿಯಂತ್ರಿಸುವುದಕ್ಕೆ ಸ್ಟೇಟಸ್ ರಿಪೋರ್ಟ್ ಟೈಪ್‌ನಲ್ಲಿ ಏನಾದರೊಂದು ತಂದು ನಿಯಂತ್ರಣ ಸಾಧಿಸುವಂಥ ಪ್ರಯತ್ನವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಮೇಲ್ನೋಟಕ್ಕೆ ಬಹಳ ಸ್ಪಷ್ಟವಾಗಿ ಕಾಣುತ್ತದೆ. ಕೋ-ಆಪರೇಟಿವ್‌ನ ಯಾವುದೇ ಶುಗರ್ ಫ್ಯಾಕ್ಟರಿಗಳು ಇರಲಿ ಅವು ಲಾಭದಾಯಕವಾಗಿ ಪ್ರಾರಂಭವಾಗುತ್ತದೆ, ಜನರು ಅಂದರೆ, ರೈತರು ಅದಕ್ಕೆ ಹಣ ಹೂಡುತ್ತಾರೆ. ಯಾರೋ ಜಾತ್ರೆ ಮಾಡಿಕೊಂಡು ತಿಂದು ತೇಗುವಂಥದ್ದು ನೂರಾರು ಘಟನೆಗಳ ಬಗ್ಗೆ ನಿಮ್ಮ ಅನುಭವಕ್ಕೆ ಬಂದಿದೆ. ಯಾವುದಾದರೂ ಒಂದು ಸಂದರ್ಭದಲ್ಲಿಯಾದರೂ ಸಹ ಈ ಕೋ–ಆಪರೇಟಿವ್ ಬೇಸಿಸ್ ಮೇಲೆ ಸಕ್ಕರೆ ಕಾರ್ಖಾನೆ ಪ್ರಾರಂಭಮಾಡಿರುವವರ ಮೇಲೆ ಕ್ರಮ ತೆಗೆದುಕೊಂಡಿರತಕ್ಕಂಥ ಉದಾಹರಣೆಗಳಿವೆಯೇ? ಕಾರಣ ಏನಿರಬಹುದು? ಬಹಳ ಪ್ರಭಾವಿ ವ್ಯಕ್ತಿಗಳು ಇಲ್ಲಿರುವುದರಿಂದ, ನಾವು ಇಲ್ಲಿ ಏನೋ ಪ್ರಶ್ನೆ ಕೇಳಬೇಕು ಅದಕ್ಕೆ ತಾವೇನೋ ಉತ್ತರ ಕೊಡಬೇಕು ಎನ್ನುವ ರೀತಿಯಲ್ಲಿ ಆಗಿದೆಯೇ ಹೊರತು, ಕಬ್ಬು ಬೆಳೆದು ಬೆವರು ಸುರಿಸತಕ್ಕಂಥ ರೈತ ಇವತ್ತಿನದಿವಸ ನೆಮ್ಮದಿಯಿಂದ ಬದುಕುವುದಕ್ಕೆ ಆಗುತ್ತಿಲ್ಲ. ಮತ್ತೆ ನಾಲ್ಕಾರು ವರ್ಷ ಲಾಭದಾಯಕವಾಗಿ ನಡೆಯತಕ್ಕಂಥದ್ದು ಕ್ಲೋಜ್ ಆಗುತ್ತದೆ, ಮತ್ತೆ ಇದನ್ನು ಅಭಿವೃದ್ಧಿಪಡಿಸುವುದಕ್ಕೆ ಮತ್ತೊಂದಕ್ಕೆ ಎಂದು ಹೇಳಿಕೊಂಡು ಎರಡು–ಮೂರು ಕೋಟಿ ರೂಪಾಯಿಗಳ ಸಾಮಗ್ರಿಗಳನ್ನು ತಂದು 8–10 ಕೋಟಿ ರೂಪಾಯಿ ಬಿಲ್ ಮಾಡಿಕೊಂಡು ತಿಂದು ತೇಗಿ ಆತ ದೊಡ್ಡವನಾಗುತ್ತಾನೆ, ರೈತರು ಬೀದಿ ಪಾಲಾಗುತ್ತಾರೆ. ಆದ್ದರಿಂದ ಈ ರೀತಿಯಾದ ಒಂದು ಕೇಸ್‌ಗಳಲ್ಲಿ ಕ್ರಮ ತೆಗೆದುಕೊಂಡಿರತಕ್ಕಂಥ ಯಾವುದಾದರೊಂದು ಉದಾಹರಣೆ ಉಂಟೆ ಅಥವಾ ಸಂಬಂಧಪಟ್ಟವರನ್ನು ಒಳಗಡೆ ಹಾಕಿರತಕ್ಕಂಥ ಉದಾಹರಣೆಗಳೆ ಇವೆಯೆ? ಒಂದು ರೀತಿ ಇವೆಲ್ಲಾ ಅಡ್ಜೆಸ್ಟ್‌ಮೆಂಟ್ ಆಗಿದೆ. ಆದ್ದರಿಂದ, ಇದಕ್ಕೆ ಕೊನೆ ಯಾವಾಗ ಆಗಬೇಕು?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಈ ಸಕ್ಕರೆ ಕಾರ್ಖಾನೆ ಬಗ್ಗೆ ಏನು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ, ಎಲ್ಲಾ ಸಹಕಾರ ಸಕ್ಕರೆ ಕಾರ್ಖಾನೆಗಳು ಬಹಳ ಕೆಟ್ಟವರು ಮತ್ತು ಖಾಸಗಿ ಸೆಕ್ಟರ್‌ರವರು ಬಹಳ ಒಳ್ಳೆಯವರೆಂದು ನಾನು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದರೆ, ಒಂದು ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದೇನೆಂದರೆ, ಇಲ್ಲಿ ಪಾರದರ್ಶಕತೆ ಬರಬೇಕಾಗುತ್ತದೆ. ಬಹಳಷ್ಟು ಕಡೆ ಪಾರದರ್ಶಕತೆಯ ಕೊರತೆ ಇದೆ. ಹಾಗೆಯೇ, ಆರ್ಥಿಕ ಶಿಸ್ತು ಕೂಡ ಕೊರತೆ ಇದೆ. ಈ ಸಕ್ಕರೆ ಕಾರ್ಖಾನೆಯಲ್ಲಿ 103 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ನಾನು ಹೇಳಿಲ್ಲ. ಈ ಸಕ್ಕರೆ ಕಾರ್ಖಾನೆಯಲ್ಲಿ ಸಾಲ ಎಷ್ಟಿದೆ ಎಂದು ಕೇಳಿದರು ಇದಕ್ಕೆ ನಾನು ಹೇಳಿದ್ದೇನೆಂದರೆ, ರೈತರಿಂದ ತೆಗೆದುಕೊಂಡಿರುವ ಡಿಪಾಸಿಟ್ ಮತ್ತು ಕೇನ್ ಪೇಮೆಂಟ್ ಹಾಗೂ ಬ್ಯಾಂಕ್‌ಗಳಿಂದ ತೆಗೆದುಕೊಂಡಿರತಕ್ಕಂಥ ಸಾಲ, ಇದು ಕೋ–ಆಪರೇಟಿವ್ ಬ್ಯಾಂಕ್‌ನಿಂದ ಇರಬಹುದು, ನ್ಯಾಷನಲೈಸ್ಡ್ ಬ್ಯಾಂಕ್ ಇರಬಹುದು ಅಥವಾ ಖಾಸಗಿ ಬ್ಯಾಂಕ್‌ನಿಂದ ಇರಬಹುದು. ಈ ಎಲ್ಲವನ್ನೂ ಒಟ್ಟು ಗೂಡಿಸಿ 102.75 ಕೋಟಿ ರೂಪಾಯಿಗಳಷ್ಟು ಎಂದು ನಾನು ಹೇಳಿದ್ದೇನೆ. ಮತ್ತೆ 2003–2004ನೇ ಸಾಲಿನಲ್ಲಿ 7.85 ಕೋಟಿ ರೂಪಾಯಿಗಳಷ್ಟು ಹಾನಿಯಾಗಿದೆ ಎಂದು ಹೇಳಿದ್ದೇನೆ. 1999, 2000ನೇ ಇಸವಿಯಿಂದ ಈ ಸಕ್ಕರೆ ಕಾರ್ಖಾನೆ ಲಾಭ ಮಾಡಿಕೊಂಡು ಬಂದಿದೆ. 20 ಲಕ್ಷ, 21 ಲಕ್ಷ, 24 ಲಕ್ಷ ಈ ರೀತಿಯಾಗಿ

ಮಾಡಿಕೊಂಡು ಬಂದಿದ್ದು, 2004ನೇ ಸಾಲಿನಲ್ಲಿ 8 ಲಕ್ಷ 80 ಸಾವಿರ ಲಾಭ ಮಾಡಿದೆ. ಈಗಾಗಲೇ ನಮ್ಮ ಹಿರಿಯ ಸದಸ್ಯರಾದ ಶ್ರೀ ಎ.ಬಿ. ಪಾಟೀಲ್‌ರವರು ಹೇಳಿದ ಹಾಗೆ ಇದು ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಆ್ಯಕ್ಟ್‌ನಲ್ಲಿ ಬರುತ್ತದೆ. ಆದ್ದರಿಂದ, ಆಡಿಟ್ ಮಾಡತಕ್ಕಂಥದ್ದು ಮಲ್ಟಿ ಸ್ಟೇಟ್ ಕೋ-ಆಪರೇಟಿವ್ ಆ್ಯಕ್ಟ್ ಪ್ರಕಾರ. ಆದ್ದರಿಂದ, ನಮಗೆ ಇದರ ಬಗ್ಗೆ ಬಹಳ ಕಡಿಮೆ ನಿಯಂತ್ರಣವಿದೆ. ಆದರೆ, ಡೈರೆಕ್ಟರ್ ಆಪ್ ಶುಗರ್ ಮುಖಾಂತರ, ಶುಗರ್ ಕಂಟ್ರೋಲ್ ಆಫೀಸ್ ಮುಖಾಂತರ ನಮಗೆ ಕಾಯಿದೆ ಕಾನೂನಲ್ಲಿ ಏನು ಅಧಿಕಾರ ಇದೆ, ಅದರ ಪ್ರಕಾರ ಶುಗರ್ ಕೇನ್ ಪೇಮೆಂಟ್ ಹಾಗೂ ಮತ್ತೊಂದು ಮಾಡಿಸತಕ್ಕಂಥಾದ್ದಕ್ಕೆ ಸಾಧ್ಯವಿದೆ. ಈಗಾಗಲೇ ನಾನು ಹೇಳಿದ ಹಾಗೆ ಇದರ ಆಡಿಟ್ ಚಾರ್ಟೆಡ್ ಅಕೌಂಟೆಂಟ್ ಮುಖಾಂತರ ಮಾಡಲಾಗಿದೆ. ಇದನ್ನು ತರಿಸಿ ತಮಗೆ ಕಳುಹಿಸಿ ಕೊಡುತ್ತೇನೆಂದು ಕೂಡ ಹೇಳಿದ್ದೇನೆ. ಇದರ ಬಗ್ಗೆ ಏನು ತನಿಖೆ ಮಾಡಿದ್ದೀರೆಂದು ಮಾನ್ಯ ವಿರೋಧಪಕ್ಷದ, ನಾಯಕರು ಈಗಾಗಲೇ ಕೇಳಿದರು. ನಾನು ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ ಈ ಸದನದಲ್ಲಿ ನಾನು ಮಾತು ಕೊಟ್ಟಿದ್ದೇನೆ. ನಿಪ್ಪಾಣಿ ಶುಗರ್ ಫ್ಯಾಕ್ಟರಿ ಬಗ್ಗೆ ಬಹಳ ವರ್ಷಗಳಿಂದ ತನಿಖೆ ಆಗದೆ ಇರುವುದಕ್ಕೆ ಡೈರೆಕ್ಷನ್ ಕೊಟ್ಟು, ಈಗಾಗಲೇ 680 ತನಿಖೆ ಮುಗಿಸಿ 69ರ ಸರ್ಚಾರ್ಜ್ ಪ್ರೊಸೀಡಿಂಗ್ಸ್ ಪ್ರಾರಂಭ ಮಾಡಿದ್ದೇವೆ. ಮತ್ತೆ ಭದ್ರಾ ಶುಗರ್ ಫ್ಯಾಕ್ಟರಿ ಬಗ್ಗೆ ಕೂಡ ನಾನು ಹೇಳಿದ್ದೇನೆ. ಇದರ ಬಗ್ಗೆ ನಾವು ಶೋಕಾಸ್ ನೋಟೀಸ್ ಕೂಡ ಕೊಟ್ಟಿದ್ದು, ಈಗ ಅಲ್ಲಿ ಹೊಸ ಆಡಳಿತ ಮಂಡಳಿ ಬಂದಿರುವುದರಿಂದ ಇದರ ಬಗ್ಗೆ ಕೇಳಿ ಎಂದು ನಾನು ಹೇಳಿದ್ದೇನೆ. ಮತ್ತೆ ಇದೇ ಸಕ್ಕರೆ ಕಾರ್ಖಾನೆ ಬಗ್ಗೆ ನಾವೇ ಇನ್‌ಸ್ಪೆಕ್ಷನ್ ಕೊಟ್ಟು ಡೈರಕ್ಟರ್ ಆಫ್ ಶುಗರ್ ಕಡೆಯವರಿಂದ ವರದಿ ತರಿಸಿ ಸೆಂಟ್ರಲ್ ರಿಜಿಸ್ಟ್ರಾರ್‌ರವರಿಗೆ ನಾವು ತಿಳಿಸಿದ್ದೇವೆ. ಇಲ್ಲಿ ಕೆಲವು ಲೋಪದೋಷಗಳು ಇವೆ, ಆದ್ದರಿಂದ ಕ್ರಮ ತೆಗೆದುಕೊಳ್ಳಬೇಕೆಂದು ನಾವು ಹೇಳಿದ್ದೇವೆ. ಆದ್ದರಿಂದ, ಇಲ್ಲಿ ಯಾರನ್ನು ಕೂಡಾ ಪ್ರೊಟೆಕ್ಟ್ ಮಾಡತಕ್ಕಂಥ ಪ್ರಶ್ನೆ ಇಲ್ಲ. ಇವು ರೈತರ ಕಾರ್ಖಾನೆಗಳು ಮತ್ತು ರೈತರಿಗೆ ಇವುಗಳು ಕಾಮಧೇನಾಗಿ ಇರಬೇಕಾಗುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಪಾರದರ್ಶಕತೆ ಮತ್ತು ಆರ್ಥಿಕ ಶಿಸ್ತು ಇವುಗಳನ್ನು ತರಬೇಕಾಗುತ್ತದೆಂದು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಇದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಮುಂದೆ ಬರುವ ಐದಾರು ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಒಳ್ಳೆಯ ಭವಿಷ್ಯ ಇದೆ. ಹಾಗಾಗಿ, ಇವುಗಳನ್ನು ಯಾವ ರೀತಿಯಾಗಿ ಸುಧಾರಣೆ ಮಾಡುವುದಕ್ಕೆ ಸಾಧ್ಯವಿದೆ ಮತ್ತೆ ಯಾವ ರೀತಿಯಾಗಿ ಪಾರದರ್ಶಕತೆ ತರುವುದಕ್ಕೆ ಸಾಧ್ಯವಿದೆ, ಹಾಗೆಯೇ ಯಾವರೀತಿಯಾಗಿ ಪ್ರೊಫೆಶನಲ್ ಮಟ್ಟಕ್ಕೆ ತರುವುದಕ್ಕೆ ಸಾಧ್ಯವಿದೆ ಎಂಬುದರ ಬಗ್ಗೆ ಕೂಡ ನಾವು ಚಿಂತನೆ ಮಾಡುತ್ತಿದ್ದೇವೆ ಮತ್ತು ಈ ಬಗ್ಗೆ ಸೂಕ್ತ ಕ್ರಮವನ್ನು ಕೂಡ ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎ.ಬಿ. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಹಕಾರ ಸಚಿವರು ಲಿಖಿತವಾಗಿ ಉತ್ತರ ಕೊಟ್ಟಿದ್ದಾರೆ. ನಾನು ಅವರಿಗೆ ಧನ್ಯವಾದಗಳನ್ನು ಹೇಳುತ್ತೇನೆ. ಏಕೆಂದರೆ, ಇವರು ಸಹಕಾರ ಸಚಿವರಾದ ಮೇಲೆ ಇವತ್ತು ಬಹಳಷ್ಟು ಶುಗರ್ ಫ್ಯಾಕ್ಟರಿಗಳ ಮೇಲೆ ತನಿಖೆ ಮಾಡುವುದಕ್ಕೆ ಹಚ್ಚಿದ್ದಾರೆ. ತನಿಖೆ ಮಾಡಿಸಿರತಕ್ಕಂಥದ್ದರ ಬಗ್ಗೆ ಶುಗರ್ ಡೈರೆಕ್ಟರ್‌ರವರೇ ಇವತ್ತು ವರದಿಯನ್ನು ಕೊಟ್ಟಿದ್ದಾರೆ. ಲಿಖಿತ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ, ಇದು ನಮ್ಮ ಆಡಳಿತ ವ್ಯಾಪ್ತಿಯಲ್ಲಿ ಬರುವುದಿಲ್ಲ, ಇದು ಕೇಂದ್ರ ಸರ್ಕಾರಕ್ಕೆ ಬರುತ್ತದೆ ಎಂದು. ಆದ್ದರಿಂದ, ಇವರು ಮಾಡಿರತಕ್ಕಂಥ ಪ್ರಿಲಿಮಿನರಿ ತನಿಖೆಯಿಂದ 120 ಕೋಟಿ ರೂಪಾಯಿಗಳಷ್ಟು ಮಿಸ್ ಅಪ್ರೋಪ್ರಿಯೇಷನ್ ಆಗಿದೆ

ಎಂದು ಈಗಾಗಲೇ ಪ್ರೂವ್ ಆಗಿದೆ. ಇದರ ವರದಿಯನ್ನು ನೀವೇ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೀರಿ. ಅಲ್ಲಿ 120 ಅಥವಾ 150 ಕೋಟಿ ರೂಪಾಯಿ ಲಾಸ್ ಆಗಿರತಕ್ಕಂಥಾದ್ದು ನನಗೇನೂ ಗೊತ್ತಿಲ್ಲ. ಪ್ರಿಲಿಮಿನರಿ ತನಿಖೆ ಮಾಡಿ ಅಂದಾಜು ಇಷ್ಟು ಲಾಸ್ ಆಗಿದೆ ಎಂದು ಅವರು ನೀಡಿರತಕ್ಕಂಥ ರಿಪೋರ್ಟ್ ನನ್ನ ಹತ್ತಿರ ಇದೆ. ಶುಗರ್ ಡೈರೆಕ್ಟರ್ ತನಿಖೆ ಮಾಡಿರತಕ್ಕಂಥಾದ್ದನ್ನು ನೀವೇ ಇವತ್ತಿನದಿವಸ ಲಿಖಿತದ ಮೂಲಕವಾಗಿ ಕೊಟ್ಟಿದ್ದೀರಿ. ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಆ್ಯಕ್ಟ್‌ನಲ್ಲಿ ಬಂದಿರತಕ್ಕಂಥ ಸಹಕಾರ ಸಂಸ್ಥೆಗಳು ಎಲ್ಲಿಗೆ ಹೋಗಬೇಕು? ಇವತ್ತು ನಮ್ಮ ರಾಜ್ಯದ, ನಮ್ಮ ಭಾಗದ, ನಮ್ಮ ಕ್ಷೇತ್ರದ ರೈತರ ಗತಿ ಏನು? ಸ್ಟೇಟ್ ಮಲ್ಟಿ ಕೋ–ಆಪರೇಟಿವ್ ಆ್ಯಕ್ಟ್ ಕೇಂದ್ರ ಸರ್ಕಾರಕ್ಕೆ ಬರುತ್ತದೆಂದು ಹೇಳಿ ರಾಜ್ಯ ಸರ್ಕಾರ ಇವತ್ತು ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ನೀವು ಸ್ಪಷ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಹಾಗೆಯೇ ಕೇಂದ್ರ ಸರ್ಕಾರಕ್ಕೂ ಕೂಡ ಒತ್ತಾಯ ಮಾಡಬೇಕು. ಹಾಗೆಯೇ ಈ ಫ್ಯಾಕ್ಟರಿ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಕೂಡ ಮಾಡಬೇಕು. ಒಂದು ವೇಳೆ ನಮಗೆ ಇದರ ಬಗ್ಗೆ ಸಂಬಂಧವಿಲ್ಲ ಇದು ಕೇಂದ್ರ ಸರ್ಕಾರಕ್ಕೆ ಬರುತ್ತದೆಂದರೆ, ಇದನ್ನು ಸಿ.ಬಿ.ಐ.ಗೆ ರೆಫರ್ ಮಾಡಿ ನೋಡೋಣ. ಇದನ್ನು ತಾವು ಹೇಳಲೇಬೇಕಾಗುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಸ್ಪಷ್ಟವಾಗಿ ಹೇಳಿದ್ದೇನೆ. ಡೈರೆಕ್ಟರ್ ಆಫ್ ಶುಗರ್‌ರವರು ಇದರ ಬಗ್ಗೆ ತನಿಖೆ ಮಾಡಿರತಕ್ಕಂಥದ್ದು ನಿಜ. ನಾವು ತನಿಖೆ ಮಾಡಿ ತಕ್ಷಣವೇ ಕ್ರಮ ತೆಗೆದುಕೊಳ್ಳುವುದಕ್ಕೆ ಸೆಂಟ್ರಲ್ ರಿಜಿಸ್ಟ್ರಾರ್‌ರವರಿಗೆ ತಿಳಿಸಿದ್ದೇವೆ. ಆದರೆ, ಇವತ್ತಿನ ಪ್ರಶ್ನೆ ಕಬ್ಬಿನ ಬಾಕಿ ಬಗ್ಗೆ ಇದೆ. ಆದ್ದರಿಂದ, ತಾವೇನು ರಿಪೋರ್ಟ್ ಬಗ್ಗೆ ಕೇಳಿದ್ದಿರಿ ಅದು ಇವತ್ತು ನನ್ನ ಕೈಯಲ್ಲಿ ಇಲ್ಲ. ಆ ರಿಪೋರ್ಟ್‌ನ ಒಂದು ಪ್ರತಿಯನ್ನು ಬೇಕಾದರೆ ನಿಮಗೆ ಕಳುಹಿಸಿಕೊಡುತ್ತೇನೆ. ಮತ್ತೆ ಈ ರಿಪೋರ್ಟ್ ಬಗ್ಗೆ ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಡೈರೆಕ್ಟರ್ ಆಫ್ ಶುಗರ್ ಅವರು ವಿಸಿಟ್ ಮಾಡಿದ ನಂತರ ಆ ರಿಪೋರ್ಟ್‌ನ್ನು ನಮ್ಮ ಹತ್ತಿರ ಇಟ್ಟುಕೊಂಡಿಲ್ಲ. Immediately, we have informed the Central Registrar. ನಮಗೆ ಇಲ್ಲಿ ನ್ಯೂನತೆ ಕಂಡು ಬಂದಿದ್ದರಿಂದ ಕ್ರಮ ತೆಗೆದುಕೊಳ್ಳುವುದಕ್ಕೆ ನಾವು ತಿಳಿಸಿದ್ದೇವೆ. ಮತ್ತೊಮ್ಮೆ ಬೇಕಾದರೆ ಇದರ ಬಗ್ಗೆ ರಿಮೈಂಡರ್ ಕೊಟ್ಟು ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇವೆ.

ಅಧ್ಯಕ್ಷರು : ಪ್ರಭಾಕರ್ ಬಂಗೇರರವರು ಪ್ಲೀಸ್.

ಶ್ರೀ ಎ.ಬಿ. ಪಾಟೀಲ್ : ಉತ್ತರವನ್ನು ನೀವು ಕೊಟ್ಟಿದ್ದೀರಿ.

ಅಧ್ಯಕ್ಷರು : ಇದು, ಅವರ ಪ್ರಶ್ನೆ, ಎಲ್ಲರೂ ಹೀಗೆ ಮಧ್ಯದಲ್ಲಿ ಕೇಳಿದರೆ ಹೇಗೆ?

ಶ್ರೀ ಆರ್.ವಿ. ದೇಶಪಾಂಡೆ : ಮೂರು–ನಾಲ್ಕು ವರ್ಷದಿಂದ ಬರಗಾಲ ಬಿತ್ತು. ನಿಮಗೆ ಗೊತ್ತಿದೆ ಬೆಳಗಾಂ ಜಿಲ್ಲೆಯಲ್ಲಿ ಇದೊಂದು ಒಳ್ಳೆಯ ಸಕ್ಕರೆ ಕೈಗಾರಿಕೆ. ನಾನು ಸಾಕಷ್ಟು ಸಲ ವಿಸಿಟ್ ಮಾಡಿದ್ದೇನೆ. ಕೈಗಾರಿಕೆ ಬಗ್ಗೆ ನಮಗೆ ಅಭಿಮಾನ ಇದೆ, ಇದು ಇಡೀ ದೇಶದಲ್ಲಿ ಎಲ್ಲಕ್ಕಿಂತ ಇದೊಂದು ಒಳ್ಳೆಯ ಕಾರ್ಖಾನೆ. ಸ್ವಲ್ಪ ಸಮಸ್ಯೆ ಇದೆ, ಇಲ್ಲವೆಂದು ನಾನು ಹೇಳಲಿಲ್ಲ.

(ಗೊಂದಲ)

ಅಧ್ಯಕ್ಷರು : ಪ್ರಭಾಕರ್ ಬಂಗೇರರವರು, ಮಾನ್ಯ ಶಶಿಕಾಂತ ಅಕ್ಕಪ್ಪ ನಾಯಕ್‌ರವರೇ ಕುಳಿತುಕೊಳ್ಳಿ....

ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ್ : ಎಷ್ಟು ದಿವಸದಲ್ಲಿ ಕೊಡುತ್ತಾರೆ ಎಂದು ಕೇಳಬೇಕಾಗಿದೆ.

ಅಧ್ಯಕ್ಷರು : ಏನು ಕೇಳಬೇಕಾಗಿದೆ, ಎಷ್ಟೊಂದು ಜನ ಕೇಳುವುದು? ಎಷ್ಟು ಗಂಟೆ ಕೇಳುವುದು?

(ಗೊಂದಲ)

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ ನಾಯಕರೆ, ಪ್ರಶ್ನೆಯನ್ನು ಎಲ್ಲರೂ ಕೇಳುವುದಕ್ಕಾಗುತ್ತದೆಯೇ? ನಿಮ್ಮ ಪರವಾಗಿ ಎ.ಬಿ. ಪಾಟೀಲರು ಕೇಳಿದ್ದಾರೆ, ಮಾನ್ಯ ವಿಶ್ವೇಶ್ವರ ಹೆಗಡೆಯವರು ಎಲ್ಲರೂ ಕೇಳಿದ್ದಾರೆ. ಅದರ ಬಗ್ಗೆ ಅರ್ಧ ಗಂಟೆ ಕೇಳುವುದಕ್ಕಾಗುತ್ತದೆಯೇ? ದಯಮಾಡಿ ಕುಳಿತುಕೊಳ್ಳಿ. ಪ್ರಭಾಕರ್ ಬಂಗೇರಾ ಅವರೇ, ನೀವು ಪ್ರಶ್ನೆ ಕೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ವಿನಂತಿ, ಮಾನ್ಯ ಸಚಿವರು ಅವರನ್ನು ಕರೆಸಿ ಅವರಲ್ಲಿರುವಂಥ ಅನುಮಾನವನ್ನಾದರೂ ಸ್ಪಷ್ಟ ಪಡಿಸಿದರೆ, ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಪ್ರಶ್ನೋತ್ತರದಲ್ಲಿ ಅವರದ್ದೇ ಆದ ಇಕ್ಕಟ್ಟಿರುತ್ತದೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ವಿಶ್ವೇಶ್ವರ ಹೆಗಡೆಯವರೆ, ತಾವು ಬೆಂಗಳೂರಿನಲ್ಲಿ ಹೇಗೆ ಭೇಟಿಯಾಗುತ್ತಿರುತ್ತೀರಿ ಅದೇ ರೀತಿ ಬೆಳಗಾಂ ಜಿಲ್ಲೆಯ ಶಾಸಕರೂ ಕೂಡ ನಮಗೆ ಹಾಗೆ ಭೇಟಿಯಾಗುತ್ತಿರುತ್ತಾರೆ. ಅವರು ಬಹಳ ಸಮೀಪ ಇದ್ದಾರೆ.

(ಗೊಂದಲ)

ಶ್ರೀ ಎ.ಬಿ. ಪಾಟೀಲ್ : ಅವರಿಗೆ ನಮಗೆ ಸಂಬಂಧವಿದೆ, ಬೆಳಗಾಂ ಜಿಲ್ಲೆಯವರ ಭೇಟಿಯಾಗುತ್ತಾರೆ.

ಶ್ರೀ ಆರ್.ವಿ. ದೇಶಪಾಂಡೆ : ಈಗ ಅವರು ಬಂದರೆ ಅವರ ಕೈಯಲ್ಲಿಯೇ ಫೈಲ್ ಕೊಡುತ್ತೇನೆ. ಇದನ್ನು ಏನು ಮುಚ್ಚಿ ಇಡುವುದು ಇದೆಯೆ? ನನಗೆ ಏನಾದರೂ ಹೈಡ್ ಮಾಡಬೇಕಾಗಿದೆಯೇ? ಯಾರನ್ನಾದರೂ ಪ್ರೊಟೆಕ್ಷನ್ ಮಾಡಬೇಕಾಗಿದೆಯೇ?

ಶ್ರೀ ಶಶಿಕಾಂತ ಅಕ್ಕಪ್ಪ ನಾಯಕ್ : ಪೂರ್ಣ ಹಣ ಯಾವಾಗ ಕೊಡುತ್ತಾರೆ ಎಂದು ಹೇಳಬೇಕು.

ಶ್ರೀ ಆರ್.ವಿ. ದೇಶಪಾಂಡೆ : ನಾನು ಹೇಳಿದ್ದೇನೆ, ರೈತರ ಹಳೆಯ ಬಿಲ್ ಎಸ್‌ಎಂಪಿ ರೇಟ್ ಆ್ಯಕ್ಟ್ ಪ್ರಕಾರ 500 ಕೋಟಿ ರೂ.ಗಳನ್ನು ಕೊಡಬೇಕೆಂದು ಹೇಳಿದ್ದೇನೆ. ನಾನು ಒಪ್ಪಿಕೊಂಡಿದ್ದೇವೆ. ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದೇನೆ, As per the Sugar Control Order, directions will be issued to pay immediately. ಅದನ್ನೂ ಕೂಡ ನಾನು ನಿಮಗೆ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ನಾಯಕರೇ, ಕುಳಿತುಕೊಳ್ಳಿ. ಬಂಗೇರ ನೀವು ಕೇಳಿ, ಅವರು ಹೊಸಬರು ಗೊತ್ತಾಗುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಹಕಾರ ಸಂಘಗಳಲ್ಲಿ ನಡೆದ ಅವ್ಯವಹಾರದ ತನಿಖೆ

610(6534) : ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?